of 15 years. In order to enable Government servants to become familiar with the language and see that they attend to this correspondence more easily, that also is under contemplation; and I trust that necessary steps and decisions will be taken early and implemented. Therefore Sir, I may submit that both in the educational institutions in the public as well as in the Government circles, necessary attention is being paid for the spread of Hindi, the national language, both in the interest of national solidarity and unity as well as for the progress of the country.

With these few remarks, I request once again Sri G. Sivappa to withdraw this cut motion with this assurance.

Sri G. SIVAPPA.—I seek leave to withdraw the cut motion, Sir.

The cut motion was, by leave, withdrawn.

Mr. SPEAKER.—Sri Madiah can move any one of his two cut motions so that others will have an opportunity of speaking on that cut motion.

Sri M. MADIAH (Nanjangud—Scheduled Castes).—I have requested the Chair to permit me to move both the cut motions and draw attention to some grievances of the scheduled castes. As a special case, I may be permitted to move both the cut motions, Sir. However, I will certainly obey the Chair.

Mr. SPEAKER.—You can refer to the subject of the second cut motion while moving the first one or *vice versa*; because my difficulty is, if I give you a chance to move two cut motions which stand in your name, the next person Sri G. Puttaswamy has got ten cut motions in his name. Others will be deprived of moving any cut motions.

Sri M. MADIAH.—I will obey the Chair, Sir. I will move the first cut motion.

Scholarships to Scheduled Castes Students in Middle and High Schools

*Sri M. MADIAH.—Sir, I beg to move :

"That the demand under the head '37. Education' for Rs. 3,77,90,000 be reduced by Rs. 100 (to urge the need for providing adequate number of Depressed Class Scholarships to the Scheduled Caste students studying in High and Middle schools in the State)."

ಸ್ವಾಮಿ, ಈ ಖೋತಾ ಸೂಚನೆ ಮೇಲೆ ಮಾತನಾಡುವಾಗ ನನಗೆ ಅಷ್ಟು ಉತ್ಸಾಹ ಬರುತ್ತಾ ಇಲ್ಲ. ಕಾರಣ ಈ ಖೋತಾ ಸೂಚನೆಯಲ್ಲಿ ಅಡಗಿರತಕ್ಕಂಥ ವಿಷಯದ ಮೇಲೆ ಮಾತನಾಡಿದನಂತರ ದೊರೆಯಬಹುದಾದ ಉತ್ತರದ, ಫಲತಾಂಶದ ವಿಚಾರದಲ್ಲಿ ಶಂಕೆಯಾಗಿರುವುದರಿಂದ ನಿರುತ್ಸಾಹ ಉಂಟಾಗಿದೆ. ಆದರೂ ಸಹ ನನ್ನ ಕರ್ತವ್ಯವನ್ನು ಮಾಡಬೇಕೆಂದು ಹೇಳಿ ನನಗೆ ಜನಾರ್ದನನ ಪ್ರೇರಣೆಯಾಗಿದೆ.

ಸ್ವಾಮಿ, ನಿಮ್ನತರಗತಿಯವರ, ದಲಿತವರ್ಗದವರ ವಿದ್ಯಾಭಿವೃದ್ಧಿ ವಿಚಾರದಲ್ಲಿ ಏನಾದರೂ ಈ ಸಭೆಯಲ್ಲಿ ಕೇಳಿದರೆ ಆ ರೀತಿ ಕೇಳುವುದು ಉಚಿತವಲ್ಲ, ಅಥವಾ ಹಾಗೆ ಕೇಳಿದರೆ ವಿಶೇಷವಾಗಿ (exclusive ಆಗಿ) ಕೇಳಿದಂತೆ ಆಗುತ್ತದೆ, ಅಥವಾ ಹಾಗೆ ಕೇಳಿದರೆ ಅದು ರಾಜ್ಯಾಂಗದ provisions ಗೆ offend ಆದಂತೆ ಆಗುತ್ತದೆ ಎನ್ನುವಂಥ ಶಂಕೆ ಸರ್ಕಾರದಿಂದ ಬಂದಹಾಗೆ ನನಗೆ ಕಾಣುತ್ತದೆ. ಏನಾದರೂ ಹೇಳಿದರೆ ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು ಎಂದು ಹೇಳುತ್ತೇನೆ. ಉತ್ತರಕ್ಕೆ ಉತ್ತರ, ಜವಾಬಿಗೆ ಜವಾಬು ಹೇಳುವುದಕ್ಕೆ ನಾನು ಇಲ್ಲಿ ನಿಂತಿಲ್ಲ. ಭಾರತ ರಾಜ್ಯಾಂಗದಲ್ಲಿ ದಲಿತವರ್ಗದವರ ವಿದ್ಯಾಭಿವೃದ್ಧಿಗೆ ಸಾಕಾದಷ್ಟು ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಹೇಳಿ ನಿರ್ದಿಷ್ಟವಾಗಿ ಗೊತ್ತುಮಾಡಿದೆ. ಅದರಲ್ಲೂ ತತ್ಪಾಪಿ ನಿಮ್ನವರ್ಗದವರ ಅಭಿವೃದ್ಧಿಗೆ ಹೆಚ್ಚು ನಿಗಾ ಕೊಡಬೇಕೆಂದು ಹೇಳಿದೆ. ಇದನ್ನು ಕೇಳಿದರೆ it is against the provisions of the Constitution...

Mr. SPEAKER.—It is too much to presume like that Sri Madiah.

ಶ್ರೀ ಎಂ. ಮಾದಯ್ಯ.—ಹಾಗೆ ಕೇಳಿದರೆ ರಾಜ್ಯಾಂಗದಲ್ಲಿ ಗೊತ್ತುಮಾಡಿರತಕ್ಕ ವಿಧಿಗೆ ಅಥವಾ ರಾಜ್ಯಾಂಗದ ಸ್ಪಿರಿಟ್‌ಗೆ ವಿರೋಧವಾಗುತ್ತದೆ ಎಂದು ಸರ್ಕಾರದಿಂದ ಉತ್ತರ ಬಂದಿದೆ. 19ನೇ ತಾರೀಖಿನ ದಿವಸ ಸರ್ಕಾರದವರು ಕೊಟ್ಟಿರತಕ್ಕ ಉತ್ತರದ ಪರಿಯನ್ನು ಪರಿಶೀಲನೆ ಮಾಡಿದರೆ ನನಗಾದರೂ ಹಾಗೆ ಅನ್ನಿಸಿತು. ನಾನು ಆ ರೀತಿ ತಿಳಿದುಕೊಂಡಿದ್ದೇನೆ. ದಯವಿಟ್ಟು ಹಾಗೆ ತಿಳಿದುಕೊಳ್ಳಬಾರದು ಎಂದು ನಾನು ಈ ಸಭೆಯಲ್ಲಿ ಸರ್ಕಾರದವರಲ್ಲಿ ವಿನಯಪೂರ್ವಕವಾಗಿ, ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಇದನ್ನು ನಾವು ಕೇಳುವಾಗ, ಸಾರ್ವಜನಿಕರಲ್ಲೂ ತತ್ಪಾಪಿ ಈ ಮಾನ್ಯ ಸಭೆಯ ಸದಸ್ಯರಲ್ಲೂ, ನಮ್ಮ ಬೇಡಿಕೆ ಅಥವಾ ಈ ಪ್ರತಿನಿಧಿಗಳ ಬೇಡಿಕೆ ಬಹಳ ವಿಶೇಷವಾಗಿದ್ದು ಸರ್ಕಾರ ಬಹಳ ವಿಶೇಷವಾಗಿ ಕೊಡುತ್ತಾ ಇದೆ; ಆ ರೀತಿ ಕೇಳತಕ್ಕದ್ದು ತಪ್ಪು; ಅದು ನಮ್ಮ ಸಂಕುಚಿತವಾದ ಮನೋಭಾವವನ್ನು ವ್ಯಕ್ತಪಡಿಸಿದಹಾಗೆ ಇದೆ ಎನ್ನುವಂಥ ಸೂಚನೆ ಕಂಡು ಬಂದಿದೆ. ಅದೂ ಅಲ್ಲದೆ ಆ ದಿವಸ ಸರ್ಕಾರದ ಉತ್ತರ ಬಂದಾಗಲೂ ಸಹ, ಸಂಕುಚಿತ ಮನೋಭಾವದಿಂದ ಹರಿಜನ ಸದಸ್ಯರು ಹೋಗಬಾರದು ಎಂಬ ಸೂಚನೆಯೂ ಕೂಡ ಬಂದಿತು; ಹಾಗೆ

(ಶ್ರೀ ಎಂ. ಮಾದಯ್ಯ.)

ಎಂದು ನಾನು ತಿಳಿದುಕೊಂಡಿದ್ದೇನೆ. ಇದು ನಮ್ಮನ್ನು ಎಷ್ಟು ಉತ್ಸಾಹರಹಿತರನ್ನಾಗಿ ಮಾಡುತ್ತದೆ ಎಂಬುದನ್ನು ಈ ಸಭೆಯಲ್ಲಿ ಮನವರಿಕೆ ಮಾಡಿ ಕೊಳ್ಳುತ್ತಾ ಇದ್ದೇನೆ.

ಸ್ವಾಮಿ, ಭಾರತ ರಾಜ್ಯಾಂಗ ಒಂದು ಹೆಜ್ಜೆ ಮುಂದೆ ಹೋಗಿ ಈ ದಲಿತವರ್ಗದವರ ವಿದ್ಯಾಭ್ಯಾಸ ಸಾಮಾಜಿಕ ಅಭಿವೃದ್ಧಿ ಇವುಗಳ ವಿಚಾರದಲ್ಲಿ ಎಷ್ಟು ದೂರ ಆಯಾ ಸಂಸ್ಥಾನಗಳು ಮತ್ತು ಕೇಂದ್ರ ಮಾಡ ಬೇಕೆಂಬುದನ್ನು ಹೇಳಿದೆ. ಆ ರೀತಿ ಹೇಳಿರುವುದನ್ನು ಗೌರವಿಸುವುದನ್ನು ಬಿಟ್ಟು ಹಾಗೆ ಹೇಳಿರತಕ್ಕ, ಗೊತ್ತು ಮಾಡಿರತಕ್ಕ ಅಂಶವನ್ನು ಕೇಳಿದರೆ ಅದು ರಾಜ್ಯಾಂಗಕ್ಕೆ ವಿರೋಧವಾದಂತೆ ಆಗುತ್ತದೆ, ಒಬ್ಬರ ಹಿತವನ್ನೇ ನಾವು ನೋಡುತ್ತಾ ಇತರರ ಹಿತವನ್ನು ನಿರ್ಲಕ್ಷ್ಯ ಮಾಡಿ ದಂತಾಗುತ್ತದೆ ಎಂಬ ಅರ್ಥ ಬರುವಂತೆ ಹೇಳೋಣ ವಾಯಿತು. ಈ ತರಹವಾಗಿ ಉತ್ತರ ಕೊಡುವುದ ರಿಂದ—ಈ ಸರ್ಕಾರದ ಉತ್ತರ ಅಪೊತ್ತಿನ ಪತ್ರಿಕೆಗ ಳಲ್ಲಿ ಪ್ರಚಾರವಾಗಿದೆ—ದೇಶದ ಜನತೆಯ ಮೇಲೆ ಎಂತಹ ಪರಿಣಾಮವುಂಟಾಗಬಹುದೆಂಬುದನ್ನು ಪರಿ ಶೀಲನೆ ಮಾಡಬೇಕಾದದ್ದು ಅತ್ಯವಶ್ಯಕ.

ಸ್ವಾಮಿ, ಯಾವ ಸರ್ಕಾರವೇ ಬರಲಿ, ಯಾರೇ ಇರಲಿ ಯಾವ ಸೌಲಭ್ಯವನ್ನು ಕೊಡಲಿ, ಕೊಡದೇ ಇರಲಿ ಈ ಅಂಶವನ್ನು ಮರೆಯುವ ಹಾಗಿಲ್ಲ. Evolution theory ಪ್ರಕಾರ ಯಾವ ಯಾವ ಕಾಲದಲ್ಲಿ ಏನೇನು ಆಗಬೇಕೋ ಆದರಂತೆ ಆಗುತ್ತದೆ. ನಾವು ಶಾಂತತೆ ಯಿಂದ ನಡೆಯಬೇಕಾಗಿದೆ. ಆದರೆ ನಾನು ಈ ಮಾನ್ಯ ಸಭೆಯ ಸದಸ್ಯರು ಸರ್ವರಲ್ಲೂ ಸಹ ಅರಿಕೆ ಮಾಡಿ ಕೊಳ್ಳುವುದೇನೆಂದರೆ ನಮಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕಾದದ್ದು ಎಲ್ಲರ ಮುಖ್ಯ ಕರ್ತವ್ಯ ಭಾರತ ರಾಜ್ಯಾಂಗವನ್ನು ಬರೆದಾಗ ಭಾರತವನ್ನು ಸೆಕ್ಯುಲರ್ ಸ್ಟೇಟ್ ಆಗಿ ಮಾಡಬೇಕೆಂದು ಹೇಳಿರ ತಕ್ಕದ್ದೇ ನಮ್ಮ substance of the Constitution ಎಂದು ಹೇಳಿ ತಿಳಿದುಕೊಂಡಿದ್ದೇನೆ. ಇದನ್ನು ಪ್ರಸ್ತಾಪಮಾಡಬೇಕಾದರೆ ಮೊದಲನೆಯ ದಿವಸವೇ ಹೇಳಿದೆ; ಭಾರತ ರಾಜ್ಯಾಂಗದ ಪ್ರಕಾರ ಸೆಕ್ಯುಲರ್ ಸ್ಟೇಟ್‌ನ ಫಲ ಹೇಗಿರಬೇಕೆಂಬುದನ್ನು ತಿಳಿಸಿದೆ. ಏನೆಂದರೆ ಸರ್ವಜನಾನ್ಸುಖಿನೋಭವಂತು ಎಂದು ಏನೋ ಹೇಳುತ್ತಾರೋ ನನಗೆ ಹೇಳುವುದಕ್ಕೆ ಬರು ವುದಿಲ್ಲ—ಹಾಗೆ ಹೇಳಿದ ಮೇರೆ ಯಾರಿಗಾದರೂ ಅನ್ಯಾಯಮಾಡಿ ನಮಗೆ ಅನುಕೂಲ ಮಾಡಿಕೊಡಿ ಎಂದು ಹೇಳಿ ನನ್ನ ಮನಸ್ಸಿನವರ್ಗಾಗಲಿ ಅಥವಾ ಇತರ ಮಾನ್ಯ ಸದಸ್ಯರ ಮನಸ್ಸಿನವರ್ಗಾಗಲಿ ಇದೆಯೇ ಎಂಬು ದನ್ನು ತಿಳಿದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ನಾನು ಸರ್ಕಾರದವರಲ್ಲಿ ತಿಳಿಸುತ್ತೇನೆ.

ಸ್ವಾಮಿ, ಈಗ ಮೈಸೂರು ಸಂಸ್ಥಾನದಲ್ಲಿನ ವಿದ್ಯಾ ಭ್ಯಾಸದ ಪ್ರಗತಿಯನ್ನು ಸ್ವಲ್ಪ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಮೈಸೂರು ಸಂಸ್ಥಾನದಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡ 13 ಇದೆ. ಕಳೆದ ಸೆನ್ಸಸ್ ನೋಡಿದರೆ ನುಮಾರು 13 ರಿಂದ 20 ರವರೆಗೂ ಹೋಗಿದೆ ಎಂದು ಹೇಳಿ ಅಂಕಿಅಂಶ ಸಂಗ್ರಹಿಸಿದ್ದಾರೆ. ತಾವು ಭಾರತದ ಇತರ ಪ್ರಾಂತಗಳನ್ನು ನೋಡಿ. ತಿರುವಾಂಕೂರು ಕೊಚ್ಚಿನಲ್ಲಿ 35 ರಿಂದ 60 ರವರೆಗೂ ಇದೆ. ಇತರ ಪ್ರಾಂತ್ಯಗಳು ಮೈಸೂರಿಗಿಂತ ಉನ್ನತ ಮಟ್ಟದಲ್ಲಿವೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಎಜ್ಯುಕೇಷನ್ ಕಮೀಷನ್ ವರದಿಯ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಅದರಲ್ಲಿ

"The Finance Commission have observed that Mysore of all the States in the Indian Union has the highest share of expenditure on education and the lowest percentage of literacy in the State."

ಹಾಗೆ ಅಂದಾಗ ಇತರರ ಮಟ್ಟದಲ್ಲಿ ಹೋಗುವುದಕ್ಕೆ ಏನೇನು ಮಾಡಬೇಕೆಂಬುದನ್ನು ಸ್ವಲ್ಪ ಅವರೋಕಿಸ ಬೇಕಾದದ್ದು ಯಾರು ಸರ್ಕಾರದ ಸೂತ್ರವನ್ನು ಕಿಡಿದು ಕೊಂಡಿದ್ದಾರೋ ಅವರ ಮುಖ್ಯ ಕರ್ತವ್ಯ ಎಂದು ನಾನು ಭಾವಿಸುತ್ತೇನೆ. ನಾನು quantitative ವಿಚಾರ ಪ್ರಸ್ತಾಪಿಸುವುದಿಲ್ಲ. Qualitative ವಿಚಾ ರದಲ್ಲಿ ಹೆಚ್ಚು ನಿಗಾ ಕೊಡಬೇಕೆಂದು ಹೇಳುತ್ತೇನೆ. ಆದರೂ quantitative ವಿಚಾರದಲ್ಲಿ ತಾವು ಸಂಪೂ ರ್ಣವಾಗಿ ನಮ್ಮ ಕೈಗಳನ್ನು ಕಟ್ಟುವುದಕ್ಕೆ ಆಗುತ್ತ ದೆಯೋ ಎಂದರೆ ಖಂಡಿತವಾಗಿಯೂ ಇಲ್ಲ. ಎಷ್ಟೋ ಜನ ದೇಶದಲ್ಲಿ ಅವಿದ್ಯಾವಂತರು ಇದ್ದಾರೆ. ಅವರಿಗೆ ಯಾವ ವಿಧವಾದ ಪ್ರೋತ್ಸಾಹ ಕೊಡಬೇಕು ಎಂಬು ದನ್ನು ಯೋಚನೆಮಾಡಬೇಕಾಗಿದೆ. ಡಿಪ್ರೆಸ್ಡ್ ಕ್ಲಾಸ್ ನವರು 15-20 ಲಕ್ಷ ಜನ ಇದ್ದಾರೆ. Percentage of literacy ತೆಗೆದುಕೊಂಡರೆ ಕೇವಲ ಎರಡು ಪರ್ಸೆಂಟು ಇದ್ದಾರೆ. ನಾನ್ ಡಿಪ್ರೆಸ್ಡ್ ಕ್ಲಾಸಿನ ವರು 30 ರಿಂದ 60 ವರೆಗೂ ಇದ್ದಾರೆ. ಒಟ್ಟಿನಲ್ಲಿ ನೋಡಿದಾಗ ಮೈಸೂರು ಸಂಸ್ಥಾನದ percentage of literacy ಶೇಕಡ 13 ಬರುತ್ತದೆ. ಇದು ದೇಶಕ್ಕೆ ಪ್ರಗತಿದಾಯಕವಾದುದೇ, ಇದು ಯಾವ ರೀತಿಯ ಪ್ರಗತಿಯನ್ನು ತೋರಿಸುತ್ತದೆ ಎಂಬುದನ್ನು ಕೇಳು ತ್ತೇನೆ. ಈಗರಾದರೂ I am putting it to you, Sir, even for Vokkaligars, what is the percentage of this class? It is within 6, ದಲಿತವರ್ಗದವರು ಯಾರು ಇದ್ದಾರೋ, ವಿದ್ಯೆ ಇಲ್ಲದೆ ವಿದ್ಯಾರಹಿತರಾಗಿ ಇದ್ದಾರೋ ಅವರಿಗೆ ವಿದ್ಯೆ ದೊರೆಯುವಂತೆ ಆಗಬೇಕು. ಅಷ್ಟೇಹೊರತು ಕೋಮುವಾರು ಭಾವನೆಯಿಂದ ಕೇಳುತ್ತಿದ್ದೇನೆ ಎಂದು ಹೇಳಿ ವ್ಯತ್ಯಾಸವಾಗಿ ಭಾವಿಸಿ ಅದನ್ನು ಮನಸ್ಸಿನ ಲ್ಲಿಟ್ಟುಕೊಳ್ಳಬಾರದು. ಅವಿದ್ಯಾವಂತರಾಗಿರತಕ್ಕ ಅನುಕೂಲ ಸ್ಥಿತಿಯಲ್ಲಿಲ್ಲದೇ ಇರತಕ್ಕ ಕುಟುಂಬವರ್ಗ ದವರಿಗೆ, ವ್ಯವಸಾಯದ ಕೂಲಿ, ಇತರ ಕೂಲಿಗಳಿಂದ ಜೀವಿಸತಕ್ಕ ಜನಗಳಿಗೆ, ಪಶುಗಳೋಪಾದಿಯಲ್ಲಿರತಕ್ಕ ಜನಕ್ಕೆ ಏನಾದರೂ ಮಾಡಿ ತಾವು ಹೆಚ್ಚು ಸೌಲಭ್ಯಗ ಳನ್ನು ಒದಗಿಸಿ ಆ ಜನತೆಯಲ್ಲಿರತಕ್ಕ percentage of literacy ಯನ್ನು ಇತರರ ಮಟ್ಟಕ್ಕೆ ತರದೆ ಈಗಿ ರತಕ್ಕ percentage ನ್ನೇ ಮುಂದುವರಿಸಿದ ಪಕ್ಷದಲ್ಲಿ ಭಾರತ ದೇಶವನ್ನು ಸೆಕ್ಯುಲರ್ ಸ್ಟೇಟ್ ಎಂದು ಕರೆ ಯುವುದಕ್ಕೆ ಸಾಧ್ಯವೇ? ಹಾಗೆ ಹೇಳುವುದಕ್ಕಾ ಗುತ್ತದೆಯೇ? ಖಂಡಿತವಾಗಿಯೂ ಇಲ್ಲ. ಇತರ ಸಂಸ್ಥಾನಗಳಿಗಿಂತ ನಮ್ಮ ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕಾಗಿ ಹೆಚ್ಚಾಗಿ ಖರ್ಚು ಮಾಡುತ್ತೇವೆ, ನುಮಾರು 418 ಲಕ್ಷ ರೂಪಾಯಿಗಳನ್ನು ವೆಚ್ಚಮಾಡು ತ್ತೇವೆ ಎಂಬ ತತ್ವವನ್ನು ಹೇಳುವಾಗ ಆದರಲ್ಲೇನು ನ್ಯೂನತೆಯುದೆಯೆಂಬುದನ್ನು ನೋಡಿ ನರಿಪಡಿಸದಿದ್ದರೆ ಕರ್ತವ್ಯಲೋಪಮಾಡಿದಹಾಗಾಗುತ್ತದೆ. ಇದನ್ನು ಧೈರ್ಯದಿಂದ ಹೇಳುತ್ತೇನೆ. ಯಾರು ಏನುಬೇಕಾ ದರೂ ತಿಳಿದುಕೊಳ್ಳಲಿ. ಸರ್ಕಾರದವರು ಈ ರೀತಿ ತಕ್ಕ ಉತ್ತೇಜನ ಹಿಂದುಳಿದವರಿಗೆ ನೀಡದಿದ್ದರೆ ಅವರ ಕಾರ್ಪಷನ್ಸ್‌ಗೆ ವಿರೋಧವಾಗಿ ಕೆಲಸಮಾಡಿದಂತಾಗು

ತ್ತದೆ. ಸರ್ಕಾರ ನಮ್ಮ ಮಾತಿನಂತೆ ನಡೆದುಕೊಳ್ಳದಿದ್ದರೆ, ರಾಜ್ಯಾಂಗಕ್ಕನುಗುಣವಾಗಿ ಸಹಾಯವನ್ನೊದಗಿಸದಿದ್ದರೆ ನಮ್ಮ ಜನರಿಗೆ ಶಾಸನಸಭೆಯ ಮಾತಿಗೆ ಬೆಲೆ ಬರಲಿಲ್ಲ, ನೀವೇ ಹೋಗಿ ಸರ್ಕಾರವನ್ನು ಕೊಡಿ ಎಂದು ಕೇಳಿ ಎಂದು ಹೇಳಬೇಕಾದ ಕಾಲ ಬರುತ್ತದೆ. ಅದಕ್ಕೆ ಅವಕಾಶ ಕೊಡಬೇಡಿ ಎಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಹಿಂದುಳಿದ ಜನಾಂಗಕ್ಕೆ ಸ್ವಲ್ಪ ಹೆಚ್ಚಾಗಿ ಕೊಟ್ಟು ಅವರನ್ನು ಉತ್ತಮಸ್ಥಿತಿಗೆ ತನ್ನಿ ಎಂದು ನಾವು ಕೇಳುವುದು ಅನುಚಿತವೆ ಅಥವಾ ತಾವು ಹೇಳುವುದು ಅನುಚಿತವೆ ಎಂಬುದನ್ನು ನೋಡಬೇಕು. ನಾವು ಕೇಳುವುದು ಸರಿಯಾಗಿದ್ದರೆ ಕಾರ್ಯಸ್ಸಿಗೆ ವಿರುದ್ಧವಾಗಿ ಸರ್ಕಾರ ನಡೆಸಿದೆಹಾಗಾಗುತ್ತದೆ. ವಿವೇಕಾನಂದರು ಈ ರೀತಿ ಹೇಳಿದ್ದಾರೆ:—

> "So long as the millions live in hunger and ignorance, I hold every man a traitor who, having been educated at their expense, pays not the least to help them."

ಇದನ್ನು ನಾವು ಮನಸ್ಸಿನಲ್ಲಿಟ್ಟು ಮುಂದುವರಿಯಬೇಕು. ಇನ್ನೂ ಮುಂದೆ ಹೀಗೆ ಹೇಳುತ್ತಾರೆ:—

> "Him I call Mahatma whose heart bleeds for the poor; otherwise, he is a Duratma."

ಯಾರು ಬಡವರೋ, ನಿಜವಾಗಿ ಯಾರು ದುಡಿದು ಕಷ್ಟಪಡುವರೋ ಅವರಿಗೆ ಸಹಾಯ ಸಾಕಷ್ಟು ಮಾಡದಿದ್ದರೆ ಖಂಡಿತವಾಗಿಯೂ ತಾವು ನ್ಯಾಯವನ್ನು ದೊರಕಿಸಿಕೊಟ್ಟಹಾಗಾಗುವುದಿಲ್ಲ. ತಾವು ಎಲ್ಲಾ ಬಡವರನ್ನೂ, ಜಾತಿಮತಗಳ ಭೇದವನ್ನೆಣಿಸದೆ ಮೇಲಕ್ಕೆತ್ತಬೇಕು, ಕೆಳಗಿರುವವರನ್ನು ಮೇಲಕ್ಕೆತ್ತುವುದಾಗಿ ರಾಜ್ಯಾಂಗದಲ್ಲಿ ಸಹ ಅವಕಾಶಮಾಡಿ ಕಮಿಟಿ ಮಾಡಿಕೊಂಡು ಅವರಿಗೆ ಸರಿಯಾದ ವ್ಯವಸ್ಥೆ ಮಾಡದಿದ್ದರೆ ಹೇಗೆ? ರಾಜ್ಯಾಂಗಕ್ಕನುಗುಣವಾಗಿ ವರ್ತಿಸದಿದ್ದರೆ, ಸಮಾಜದಲ್ಲಿರುವ ಬಡವರು ಕೆಳಮಟ್ಟಕ್ಕೆ ಹೋಗಿ ಬಲ್ಲಿದರು ಮೇಲ್ಮಟ್ಟಕ್ಕೆ ಬಂಪರೆ ಅದು ಸರಿಯೆ?

> "Irrespective of the caste or creed to which he belongs."

ಇದನ್ನು ವಿದ್ಯಾಭ್ಯಾನದ ಬಾಬಿನಲ್ಲಿ ಮಾತ್ರವಲ್ಲದೆ ಎಲ್ಲಾಬಾಬುಗಳಲ್ಲೂ ಗಮನಿಸಿ ತಕ್ಕ ಪ್ರೋತ್ಸಾಹ ನೀಡಬೇಕು. ಈ ಖೋತಾ ನಿರ್ಣಯದಲ್ಲಿರುವ ರೀತಿಯಲ್ಲಿ ಮಾಡದೆ ಇದ್ದಪಕ್ಷದಲ್ಲಿ, ಏನಾದರೂ 'ಹಣವಿಲ್ಲ, I am sorry my heart is with you but head is against' ಎಂದು ಹೇಳುವುದಾದರೆ ಅದು ನಿಜವಾಗಿಯೂ ನ್ಯಾಯವಲ್ಲ. ಎಷ್ಟು ಹೇಳಿದರೂ ವಿದ್ಯಾಭ್ಯಾನದ ಬಾಬಿಗೆ ಈಸಲವೂ ಬಜೆಟ್ಟಿನಲ್ಲಿ 4 ಲಕ್ಷ ವಾದರೂ ಹೆಚ್ಚಾಗಿ ಹಿಂದುಳಿದ ಪಂಗಡದವರಿಗೆ ಮತ್ತು ನಿಮ್ಮವರ್ಗದವರಿಗೆ ಸಹಾಯ ನೀಡಲು ಕೊಡದೆ 5 ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ವಿದ್ಯಾರ್ಥಿವೇತನಕ್ಕಾಗಿ ಕೊಟ್ಟಿದ್ದಾರೆ. ಬೇಕಾದಷ್ಟು ಇಡೆಯ್ ರೆಕ್ಟ್ ಟ್ಯಾಕ್ಸ್, ಡೈರೆಕ್ಟ್ ಟ್ಯಾಕ್ಸ್ ಹಾಕುತ್ತಿದ್ದಾರೆ, ಸೇಲ್ಸ್ ಟ್ಯಾಕ್ಸ್ ಹೆಚ್ಚುಮಾಡಿದ್ದಾರೆ. ಈ ದಿವಸ ಬಟ್ಟೆಗಳ ಮೇಲೆ ಸಿನಿಮಾಗಳ ಮೇಲೆ ತೆರಿಗೆ ಹೆಚ್ಚಾಗಿ ಬರುತ್ತಿದೆ. ಆದರೆ ದೇಶಸೇವೆ ಮಾಡುವ, ದೇಶಕ್ಕೆ ಬೆನ್ನುಮೂಳೆಯೆಂದು ಹೇಳುವ ಬಡವರಿಗೆ, ವ್ಯವಸಾಯ, ಕೈಗಾರಿಕೆ ಮುಂತಾದ ಬಾಬುಗಳಲ್ಲಿ ದುಡಿದು ಬೆವರು ಸುರಿಸುತ್ತಿರುವ ಹಿಂದುಳಿದ ಜನಾಂಗಕ್ಕೆ ಅನುಕೂಲ ಸಾಕಾದಷ್ಟು ದೊರಕಿಸಿಕೊಡದೆ ಅವರನ್ನು ದೂರ ಮಾಡಿ ಕಾಡಿನಲ್ಲಿರುವ ಮ್ಯಾಗಗಳೋಪಾದಿಯಲ್ಲಿ ಕಾಣುವುದು ಸರಿಯೇ! ಖಂಡಿತ ಇದು ಧರ್ಮವಲ್ಲ, ಜನ ಮೆಚ್ಚುವುದಿಲ್ಲ. ಕೆಳಗಿರುವವರನ್ನು, ಹಿಂದುಳಿದವರನ್ನು ಮುಂದಕ್ಕೆ ತರಲು ಈಗ ಅನುಸರಿಸುತ್ತಿರುವ ನೀತಿ ಸರಿಯಾಗಿಲ್ಲ, ಮಾರ್ಗ ಸರಿಯಾಗಿಲ್ಲ. ಕೆಳಗಿರುವವರನ್ನು ಮುಂದುವರಿದಿರುವವರ ಮಟ್ಟಕ್ಕೆ ತರಬೇಕಾದದ್ದು ಉಚಿತ, ಇದಕ್ಕೆ ಒಂದು ಮಿತಿಯಿದೆ ಒಂದು ಸರಿಯಾದ ನೀತಿಯನ್ನನುಸರಿಸಿ, ಒಂದಲ್ಲ ಹತ್ತು ವಿಧಗಳಲ್ಲ ಯೋಚನೆಮಾಡಿ ಇದಕ್ಕೆ ಅವಕಾಶ ಮಾಡಬೇಕು. ನಾನು ಹೇಳುವ ಮಾತಿನಲ್ಲಿ ಏನಾದರೂ ತಪ್ಪಿದೆಯೆಂದು ಮಾನ್ಯ ಸದಸ್ಯರು ಯಾರಾದರೂ ಹೇಳುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ಈ ಅಧಿವೇಶನದಲ್ಲಿ 791ನೆಯ ಪ್ರಶ್ನೆಗೆ ಉತ್ತರ ಕೊಟ್ಟಿರುವುದನ್ನು ಈ ಸಂದರ್ಭದಲ್ಲಿ ನಭೆಯ ಗಮನಕ್ಕೆ ತರಬೇಕಾಗಿದೆ. ಕಳೆದ ಐದು ವರ್ಷಗಳಲ್ಲಿ ಸ್ಕಾಲರ್‌ಷಿಪ್ಪುಗಳನ್ನು ಎಷ್ಟು ಮಂದಿ ಡಿಪ್ರೆಸ್ಡ್ ಕ್ಲಾಸಿನವರಿಗೆ ಕೊಟ್ಟಿದ್ದಾರೆಂಬ ಬಗ್ಗೆ ಅಂಕಿ ಅಂಶಗಳನ್ನು ಈ ಸಂದರ್ಭದಲ್ಲಿ ನೋಡಬೇಕಾಗಿದೆ. ಹೈ ಸ್ಕೂಲುಗಳಲ್ಲಿ 1948-49 ನೆಯ ಸಾಲಿನಲ್ಲಿ 1,019 ಅರ್ಜಿಗಳು ಬಂದಿದ್ದಕ್ಕೆ 487 ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಕೊಟ್ಟರು, 1949-50 ರಲ್ಲಿ 1,449 ಅರ್ಜಿಗಳು ಬಂದಾಗಲೂ 487 ಮಂದಿಗೆ ಮಾತ್ರ ಕೊಟ್ಟರು, 1950-51ರಲ್ಲಿ 1,449 ಅರ್ಜಿಗಳು ಬಂದಾಗ 567 ಜನರಿಗೆ ಕೊಟ್ಟರು, 1951-52ರಲ್ಲಿ 1,597 ವಿದಾರ್ಥಿಗಳು ಅರ್ಜಿ ಕೊಟ್ಟಾಗಲೂ 567 ಮಂದಿಗೆ ಮಾತ್ರ ಕೊಟ್ಟರು, 1952-53ರಲ್ಲಿ ಅರ್ಜಿಗಳ ಸಂಖ್ಯೆ ಇನ್ನೂ ಹೆಚ್ಚಿ 1,673 ಆದರೂ 567 ಜನರಿಗೆ ಮಾತ್ರ ಕೊಟ್ಟರು. ಇನ್ನು ಮಿಡ್ಲ್ ಸ್ಕೂಲುಗಳಿಗೆ ಒದಗಿನರಾದ ಸ್ಕಾಲರ್‌ಷಿಪ್ಪುಗಳ ಸಂಖ್ಯೆ ನೋಡೋಣ. 1948-49ರಲ್ಲಿ ಬಂದ ಅರ್ಜಿಗಳ ಸಂಖ್ಯೆ 3,282, ಒದಗಿನಲಾದ ಸ್ಕಾಲರ್‌ಷಿಪ್ಪುಗಳ ಸಂಖ್ಯೆ 799; 1949-50ರಲ್ಲಿ ಅರ್ಜಿಗಳ ಸಂಖ್ಯೆ ಹೆಚ್ಚಿ 4,304 ಆದರೂ 799 ಮಂದಿಗೆ ಮಾತ್ರ ಕೊಟ್ಟರು; 1950-51 ರಲ್ಲಿ 4,409 ಅರ್ಜಿ ಬಂದು 899 ಜನರಿಗೆ ಕೊಟ್ಟರು; 1951-52ರಲ್ಲಿ 4,759 ಅರ್ಜಿ ಬಂದಾಗಲೂ 899 ವಿದ್ಯಾರ್ಥಿಗಳಿಗೆ ಮಾತ್ರ ಕೊಟ್ಟರು; 1952-53 ನೆಯ ಸಾಲಿನಲ್ಲಿ 4,493 ಅರ್ಜಿ ಬಂತು, 899 ಜನರಿಗೆ ಕೊಟ್ಟರು. ಅರ್ಜಿಗಳ ಸಂಖ್ಯೆ ಕ್ರಮೇಣ ಜಾಸ್ತಿಯಾಗುತ್ತಾ ಬಂದರೂ ಸ್ಕಾಲರ್‌ಷಿಪ್ಪುಗಳ ಸಂಖ್ಯೆ ಅದಕ್ಕನುಗುಣವಾಗಿ ಹೆಚ್ಚಲಿಲ್ಲ. ಹೀಗಾದರೂ ಪ್ರಾಥಮಿಕ ವಿದ್ಯಾಭ್ಯಾಸ, ಮಾಧ್ಯಮಿಕ ವಿದ್ಯಾಭ್ಯಾಸ ಪೂರೈಸಿ ಹೈ ಸ್ಕೂಲು ಕಾಲೇಜುಗಳಿಗೆ ಬಂದು ಓದುವುದು ಹೇಗೆ? ಸಾಕಾದಷ್ಟು ಪ್ರೋತ್ಸಾಹ ಹಿಂದುಳಿದ ಬಡ ಮಕ್ಕಳಿಗೆ ಹೈ ಸ್ಕೂಲು ಕಾಲೇಜುಗಳಲ್ಲಿ ಸಿಕ್ಕದಿದ್ದರೆ ವಿದ್ಯಾಭ್ಯಾಸ ಮುಂದುವರಿಸಲು ಸಾಧ್ಯವಿಲ್ಲದೆ ಹಿಂದಕ್ಕೆ ಹೋಗುತ್ತಾರೆ. ಆಗ ಅವರಿಗಾಗಿ ಖರ್ಚು ಮಾಡುವ ಹಣ ವಿದ್ಯಾಭ್ಯಾಸದ ಬಾಬಿನಲ್ಲಿ ಎಷ್ಟು ನಿರರ್ಥಕವಾಗುತ್ತದೆಂಬುದನ್ನು ಯೋಚನೆಮಾಡಿದ್ದೀರಾ? ಇದಕ್ಕಾಗಿ ಹೈ ಸ್ಕೂಲು ಕಾಲೇಜು ವಿದ್ಯಾಭ್ಯಾಸ ಮುಗಿಯುವವರೆಗೆ ಎಲ್ಲಾ ತರಗತಿಗಳಲ್ಲೂ ಡಿಪ್ರೆಸ್ಡ್ ಕ್ಲಾಸಿನವರಿಗೂ ಮತ್ತು ಬ್ಯಾಕ್‌ವರ್ಡ್ ಕ್ಲಾಸಿನವರಿಗೂ ಹೆಚ್ಚಾಗಿ ಸ್ಕಾಲರ್‌ಷಿಪ್ಪುಗಳನ್ನು ಕೊಡಬೇಕು ಮತ್ತು ಇತರ ಸೌಕರ್ಯಗಳನ್ನೂ ಒದಗಿನಬೇಕು. ಈಗಿರುವ ಸ್ಕಾಲರ್‌ಷಿಪ್ಪುಗಳ ಸಂಖ್ಯೆಯನ್ನು ಶೇಕಡ ನೂರರಷ್ಟು ಹೆಚ್ಚಿನಬೇಕು. ನಿರ್ಣಯದಲ್ಲಿ ಕೇಳಿರುಹಾಗೆ ಈಗಿರುವುದನ್ನು ಎರಡರಷ್ಟಾದರೂ ಮಾಡಬೇಕು. ಹಿಂದೆಯೂ ಸಹ ಬ್ಯಾಕ್‌ವರ್ಡ್

(ಶ್ರೀ ಎಂ. ಮಾದಯ್ಯ.)

ಕ್ಲಾಸ್ ಮತ್ತು ಡಿಪ್ರೆಸ್ಡ್ ಕ್ಲಾಸು ಪಂಗಡದವರಿಗೆ ಕೊಟ್ಟಿರುವ ವಿದ್ಯಾರ್ಥಿವೇತನಗಳ ತಪಶೀಲನ್ನು ನಾನು ತಿಳಿಸಿದ್ದೇನೆ. ಹಿಂದುಳಿದ ಪಂಗಡಗಳವರಿಂದ ವಿದ್ಯಾರ್ಥಿ ವೇತನಕ್ಕಾಗಿ ಈ ಸಾಲಿನಲ್ಲಿ ಎಲ್ಲಾಜಿಲ್ಲೆಗಳಿಂದಲೂ 10,761 ಅರ್ಜಿಗಳು ಬಂದಿವೆ, ನಿಮ್ನತರಗತಿಗಳವರಿಂದ 1,397 ಅರ್ಜಿಗಳು ಬಂದಿವೆ. ಅಲಾಟ್‌ಮೆಂಟ್ ಡಿಪ್ರೆಸ್ಡ್ ಕ್ಲಾಸಿಗೆ 42,525 ರೂಪಾಯಿಗಳನ್ನೂ, ಬ್ಯಾಕ್‌ವರ್ಡ್ ಕ್ಲಾಸಿಗೆ 1,23,950 ರೂಪಾಯಿಗಳನ್ನೂ ಕೊಟ್ಟಿದ್ದಾರೆ; ಡಿಪ್ರೆಸ್ಡ್ ಕ್ಲಾಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಸೇರಿ 2,066 ಮಂದಿಗೆ ವಿದ್ಯಾರ್ಥಿವೇತನಗಳನ್ನೊದಗಿಸಿದ್ದಾರೆ. ಇದನ್ನು ಸರಿಯಾಗಿ ನೋಡಿದರೆ ಶೇಕಡ 10 ಅಥವಾ 15 ರಷ್ಟು ಮಂದಿಗೆ ಮಾತ್ರ ಒದಗಿಸಿದಂತಾಗಿದೆ. ಇನ್ನೂ ಮುಕ್ಕಾಲುಭಾಗ ಜನರಿಗಿಲ್ಲ. ಆದ್ದರಿಂದ ಅರ್ಜಿ ಹಾಕಿರುವವರಲ್ಲಿ ಅನುಕೂಲಸ್ಥರೆಷ್ಟು ಜನವೆಂಬುದನ್ನು ನೋಡಿ ಅಂಥವರ ಅರ್ಜಿಗಳನ್ನು ಸ್ಥಳೀಯ ಆಫೀಸರುಗಳಿಗೆ ಕಳುಹಿಸಿ ತನಿಖೆಮಾಡಿನೋಡಿ ನಿರ್ಗತಿಕರಿಗೆ, ನಿಜವಾಗಿಯೂ ಅರ್ಹರಾದವರಿಗೆ ಹಿಂದುಮುಂದೆ ನೋಡದೆ ಕೊಡಬೇಕು. ಹಾಗೆ ಕೊಡದಿದ್ದಪಕ್ಷದಲ್ಲಿ ಖಂಡಿತ ಅನ್ಯಾಯವಾಗುತ್ತದೆ. ಈ ಸರ್ಕಾರ ಬಂದ ಮೇಲೆ ನಾವು ಮೂರನೆಯ ಬಡ್ಜೆಟ್ಟನ್ನು ಅಂಗೀಕಾರ ಮಾಡುತ್ತಿದ್ದೇವೆ. ಈ ಬಡ್ಜೆಟ್ಟಿನಲ್ಲಿ ಈಸಲವೂ ಡಿಪ್ರೆಸ್ಡ್ ಕ್ಲಾಸು ಮತ್ತು ಬ್ಯಾಕ್‌ವರ್ಡ್ ಕ್ಲಾಸು ಜನರಿಗೆ ಪ್ರೈಮರಿ, ಮಿಡ್ಲ್ ಮತ್ತು ಹೈ ಸ್ಕೂಲುಗಳಲ್ಲಿ ಮತ್ತು ಕಾರೇಜುಗಳಲ್ಲಿ ಎಷ್ಟೆಷ್ಟು ಹಣ ಕೊಟ್ಟಿದೆಯೆಂಬುದನ್ನು ದಯವಿಟ್ಟು ಹೇಳಿ. ಅದನ್ನು ನೋಡಿದರೆ ತಮ್ಮ ಪಾಲಿಸಿ ಪ್ರೊಗ್ರೆಸಿವ್ ಆಗಿದೆಯೆ, ಉದಾರನೀತಿಯನ್ನು ಅನುಸರಿಸಿದ್ದೀರಾ ಎಂಬುದು ವ್ಯಕ್ತವಾಗುತ್ತದೆ. ಒಂದು ಕಾಸೂ ಹೆಚ್ಚಿಸಿಲ್ಲ. ಏಕೆ ಹೆಚ್ಚಾಗಿ ಕೊಡಬಾರದು? ಈಸಲವಾದರೂ ಜಾಸ್ತಿಯಾಗಿ ಒದಗಿಸಿದ್ದೀರಾ? ಏಕೆ 2 ಲಕ್ಷ ಹೆಚ್ಚಿಸಬಾರದು? ಈಗಿರುವ ಹಣವನ್ನು ಡ್ರಿಗುಣಮಾಡಿದರೆ ಒಂದೆರಡು ಲಕ್ಷ ಜಾಸ್ತಿ ಕೊಟ್ಟಹಾಗಾಗುತ್ತದೆ. ಸುಮಾರು 5 ಲಕ್ಷ ರೂಪಾಯಿಗಳಾದರೆ ಸಾಕು. ಇದಕ್ಕೇಕೆ ಹಿಂದುಮುಂದೆ ನೋಡುತ್ತೀರಿ? ಡಿಪ್ರೆಸ್ಡ್ ಕ್ಲಾಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ವಿದ್ಯಾರ್ಥಿವೇತನಕ್ಕೆ ಎಲ್ಲಾಗೈಡೆನ್ಸಲ್ಲೂ ಇರುವ ಅಲಾಟ್‌ಮೆಂಟ್ ಜಾಸ್ತಿ ಮಾಡಬೇಕು. ಇದು ತಮ್ಮ ಮುಖ್ಯವಾದ ಕರ್ತವ್ಯ. ಇದಾಗದಿದ್ದರೆ ಖಂಡಿತವಾಗಿಯೂ ಜನತೆ ಯೋಚನೆ ಮಾಡಬೇಕಾಗುತ್ತದೆ, ಬೇರೆ ರೀತಿಯಲ್ಲಿ ಸರ್ಕಾರ ಈ ಕೆಲಸಮಾಡುವಂತೆ ಮಾಡಬೇಕಾಗುತ್ತದೆ. ಇದಕ್ಕೆ ಅವಕಾಶ ಕೊಡಬೇಡಿ ಎಂದು ವಿನಯಪೂರ್ವಕವಾಗಿ ಹೇಳಿ ಈ ಖೋತಾಸೂಚನೆಯನ್ನು ಸಭೆಯಮುಂದಿಟ್ಟು ಮಾನ್ಯ ಸದಸ್ಯರೆಲ್ಲರೂ ಸಹ ಈ ಸೂಚನೆಯ ಮೇಲೆ ನಾನು ಹೇಳುವುದನ್ನು ಕೇಳಿ ಎಲ್ಲಾ ವಿಷಯಗಳಿಗೂ ಸಂಪೂರ್ಣ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—Sri Madiah, if you read the question No. 791 that was answered this morning, you will find out from the figures available there that in 1950-51, 80 scholarships were increased in High Schools and in Middle Schools 100 scholarships were increased. The number of applications received in 1952-53 as compared with the number received in 1950-51 shows only 84 in excess for Middle Schools. Are not Government doing something in this direction?

ಶ್ರೀ ಎಂ. ಮಾದಯ್ಯ.—ಹೈಸ್ಕೂಲು ಮತ್ತು ಮಿಡ್ಲ್ ಸ್ಕೂಲುಗಳಿಗೆ 1950-51 ರಿಂದ ಒಂದೇ ಸಮನಾಗಿದೆಯೆಂದು ಹೇಳಿದೆ.

Mr. SPEAKER.—From the figures you can see that 80 scholarships for High Schools and 100 scholarships for Middle Schools have been increased. I do not mean to say that more scholarships should not be given; do not mistake me. You must, at the same time, also appreciate the action of Government.

ಶ್ರೀ ಎಂ. ಮಾದಯ್ಯ.—ಅಲಾಟ್‌ಮೆಂಟ್ 1948-49ರಲ್ಲಿ ಹೈಸ್ಕೂಲಿಗೆ 487 ಇದೆ, ಮಿಡ್ಲ್ ಸ್ಕೂಲಿಗೆ 799 ಇದೆ; ಅದರ ಮುಂದಿನ ವರ್ಷವೂ ಇಷ್ಟೇ ಇದೆ.

Mr. SPEAKER.—Number of applications also are only 84 more.

ಶ್ರೀ ಎಂ ಮಾದಯ್ಯ.—ಈಗ 100 ವಿದ್ಯಾರ್ಥಿವೇತನ ಹೆಚ್ಚಾಗಿದೆಯೆಂದು ಹೇಳಿದರೂ 1950-51 ರಿಂದ 1953-54 ರವರೆಗೂ ಬಡ್ಜೆಟ್ ಪ್ರಪೋಸಲ್ 3-4 ವರ್ಷಗಳಿಂದ ಒಂದೇ ಸಮನಾಗಿದೆಯೆಂದು ತೋರಿಸಲು ನಾನು ಅಷ್ಟು ಹೇಳಿದೆ. ಅದರಲ್ಲೂ ಅಲಾಟ್‌ಮೆಂಟಿಗೂ ಅರ್ಜಿಗಳು ಬಂದಿರುವುದಕ್ಕೂ ಹೋಲಿಸಿ ಎಷ್ಟನೆಯ ಒಂದು ಭಾಗ ಬರುತ್ತದೆಯೆಂಬುದನ್ನು ನೋಡಬೇಕು. ಈಗಲೆ 400 ಅಲಾಟ್‌ಮೆಂಟಿದ್ದು 4 ಸಾವಿರ ಅರ್ಜಿ ಬಂದರೆ ಎಷ್ಟು ಭಾಗ ಬರುತ್ತದೆಯೆಂದು ನೋಡಬೇಕು. ಅರ್ಜಿಗಳ ಸಂಖ್ಯೆ ಮತ್ತು ಒದಗಿಸಿರುವ ಹಣ ಹೋಲಿಸಿದರೆ ಶೇಕಡ 15ರಿಂದ 20ರವರೆಗೆ ದೊರಕಿದಂತಾಗುತ್ತದೆ.

ಈ ಸ್ಕಾಲರ್‌ಷಿಪ್ ಹಂಚಿಕೆಯಲ್ಲಿ ಅಪ್ಲಿಕೇಷ್ಟಗಳು ಎಷ್ಟು ಬರುತ್ತವೆ, allotment ಎಷ್ಟಿದೆ, ಯಾವ ಯಾವ ಕೋಮಿಗೆ ಎಷ್ಟು ಹಂಚಿಕೆ ಮಾಡಿದರೆ ರಾಜ್ಯಾಂಗ ತತ್ವಕ್ಕೆ ಅನುಸಾರವಾಗಿ ನಡೆದಂತಾಗುತ್ತದೆ ಎಂಬುದನ್ನು ಗಣನೆಗೆ ತೆಗೆದುಕೊಂಡು ಅದಕ್ಕನುಸಾರವಾಗಿ ವರ್ತಿಸಬೇಕಾದುದು ಸರ್ಕಾರದ ಕರ್ತವ್ಯ.

3 P.M.

*Sri A. G. RAMACHANDRA RAO.—I may correct the Hon'ble Member by giving some factual information. 1949-50ರಲ್ಲಿ 480 ಜನರಿಗೆ ಸ್ಕಾಲರ್‌ಷಿಪ್ ಕೊಟ್ಟಿದೆ. ಆದರೆ ಬಂದ ಅಪ್ಲಿಕೇಷ್ಟ ಸಂಖ್ಯೆ 1,449. ಅದರ ಮೂರನೆಯ ವರ್ಷ 50 ಅಪ್ಲಿಕೇಷ್ಟಗಳು ಜಾಸ್ತಿಯಾಗಿವೆ. ಆದರೆ 80 ಜನರಿಗೆ ಹೆಚ್ಚಾಗಿ ಕೊಟ್ಟಿದೆಯೆಂಬುದು ಅಂಕಿ ಅಂಶಗಳಿಂದಲೇ ಗೊತ್ತಾಗುತ್ತದೆ. ಅದೇ 1952-53ನೆಯ ವರ್ಷದಲ್ಲಿ 1,673 ಅಪ್ಲಿಕೇಷ್ಟಗಳು ಬಂದಿವೆ. ಆ ವರ್ಷ 83 ಜನರಿಗೆ ಜಾಸ್ತಿ ಕೊಟ್ಟಿದೆ. ಇದೇ ರೀತಿ ಲೆಕ್ಕ ಹಾಕಿದರೆ number of applications received and number of

scholarships granted—ಇವುಗಳನ್ನು ನೋಡಿದರೆ ಹೆಚ್ಚು ಪ್ರಮಾಣದಲ್ಲಿ ಕೊಟ್ಟಿರುವುದು ವ್ಯಕ್ತವಾಗುತ್ತದೆ.

ಶ್ರೀ ಎಂ. ಮಾದಯ್ಯ.—ಬಂದಿರತಕ್ಕ ಅಪ್ಲಿಕೇಷನ್ ನಂಬ್ಯೆ ಎಷ್ಟು, ಸ್ಕಾಲರ್‌ಷಿಪ್ allotment ಎಷ್ಟು ಎಂಬುದನ್ನು ಪರಿಶೀಲಿಸಿ, ತಾರತಮ್ಯವನ್ನು ಗಣನೆಗೆ ತೆಗೆದುಕೊಂಡುದೇ ಆದರೆ, ಈ ಸ್ಕಾಲರ್‌ಷಿಪ್ ಪ್ರತಿ ವರ್ಷವೂ ಅಷ್ಟಾಗಿ ಹೆಚ್ಚಾಗಿಲ್ಲವೆಂಬುದು ಕಂಡು ಬರುತ್ತದೆ. ರಾಜ್ಯಾಂಗದ 46ನೆಯ ವಿಧಿಯಲ್ಲಿ weaker sectionನ್ನಿಗೆ ಯಾವ ರೀತಿ protection ಕೊಡಬೇಕೆಂಬುದನ್ನು ಸ್ಪಷ್ಟವಾಗಿ ಹೇಳಿದೆ :

"The State shall promote with special care....."

Compare the number of applications received and the number granted. Any greater ratio? I invite the Hon'ble Minister to refer to article 46 of the Constitution. It refers to 'weaker sections.'

Sri A. G. RAMACHANDRA RAO.—Such cases we take note of.

Sri M. MADIAH.—It says—

"The State shall promote with special care the educational and economic interests of the weaker sections of the people, and, in particular, of the Scheduled Castes and the Scheduled Tribes, and shall protect them from social injustice and all forms of exploitation."

What is the special care that the Government have taken according to the above article?

Sri A. G. RAMACHANDRA RAO.—Every student from the first class to the highest class at present is given freeship. That is the special concession given.

Sri M. MADIAH.—After the Constitution came into force, I know that the public at large and the Hon'ble Members of the Legislature ever since the Legislature came into being in Mysore, are very kind to the Scheduled Castes.

Sri A. G. RAMACHANDRA RAO.—Thank you.

Sri M. MADIAH.—I do not deny that. But now, after the Constitution came into force, I do not know what steps are taken by the Government which will go to show that they have taken special care?

Sri A. G. RAMACHANDRA RAO.—It is the good luck of Mysore people that long before the Constitution came, Mysore implemented the very idea embodied in the Constitution. It is the good luck of the people in Mysore.

Sri M. MADIAH.—It is said there—

"and shall protect them from social injustice and all forms of exploitation."

ಈ protection ವಿಚಾರದಲ್ಲಿ ಸರ್ಕಾರದವರು ಕೊಟ್ಟಿರುವ special care ಏನು ಎಂಬುದನ್ನು ನೋಡಬೇಕಾಗಿದೆ. ಈ ವಿಚಾರದಲ್ಲಿ ಬೇಲಿ ಎದ್ದು ಹೊಲ ಮೇಯದಂತೆ ನೋಡಿಕೊಳ್ಳದಿದ್ದರೆ ಆ ಹೊಲದ ಫಸಲನ ಯೋಗಕ್ಷೇಮ ನೋಡತಕ್ಕವರು ಯಾರು? ರಾಜ್ಯಾಂಗದ 338ನೆಯ ವಿಧಿಯಲ್ಲಿ "There shall be a special officer for the Scheduled Tribes....." Next, it is said that there shall be a special officer appointed for the Scheduled Castes and Tribes to be appointed by the President and it shall be the duty of the special officer to investigate all matters relating to the Scheduled Castes and Tribes under the Constitution and report to the President upon the working of the safeguards. A special officer has been appointed to examine the adequacy or otherwise of the facilities given. I do not know . . . .

Sri A. G. RAMACHANDRA RAO.—May I bring to the notice of the Chair that that subject is a little foreign to the subject on hand? We are speaking of the constitution of special officers, what provisions relating to then are implemented and what have not been implemented. That is not the subject under discussion.

Sri M. MADIAH.—And then, Sir,—

"In this article, references to the Scheduled Castes and Scheduled Tribes shall be construed as including references to such other backward classes as the President may, on receipt of the report of a Commission appointed under clause (1) of article 340, by order specify and also the Anglo-Indian community."

ನಾನು ತಿಳಿದಿರುವ ಮಟ್ಟಿಗೆ weaker section ಎಂದರೆ ಡಿಪ್ರೆಸ್ಡ್‌ಕ್ಲಾಸ್‌ನವರೆಂದೇ ಅಲ್ಲ. ಯಾರು ಆರ್ಥಿಕವಾಗಿಯೂ ಮತ್ತು ಸಾಮಾಜಿಕವಾಗಿಯೂ (economically and socially) ಹಿಂದುಳಿದಿರುತ್ತಾರೋ ಅವರೆಲ್ಲರೂ weaker section ಎಂದೇ ಪರಿಗಣಿಸಲ್ಪಡಬೇಕು. ಆದುದರಿಂದ Special Officer for Depressed Classes ಇತರ backward classes ವಿಚಾರವನ್ನೂ ಗಣನೆಗೆ ತೆಗೆದುಕೊಳ್ಳ

(SRI M. MADIAH.)

ಬೇಕೆಂದು ನನ್ನ ಸೂಚನೆ. ನಮ್ಮ ಮೈಸೂರು ಸಂಸ್ಥಾನದ ವಿಚಾರದಲ್ಲಿ ಹೊರಗಿನವರು ಬಹಳ ಒಳ್ಳೆಯ ಅಭಿಪ್ರಾಯವನ್ನು ಇಟ್ಟು ಕೊಂಡಿರುತ್ತಾರೆ. ಅದನ್ನ keep up ಮಾಡಬೇಕೆಂದು ಸರ್ಕಾರದವರನ್ನು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. Weaker Section ನವರಿಗೆ ರಾಜ್ಯಾಂಗದಲ್ಲಿ ವಿಧಿನಲ್ಪಟ್ಟಿರು ವಂತೆ adequate safeguard ಇಲ್ಲವೆಂಬ ಶಂಕೆಗೆ ಮಾತ್ರ ಅವಕಾಶ ಕೊಡಬಾರದೆಂದು ಅವರಲ್ಲಿ ನನ್ನ ವಿನಯ ಪ್ರಾರ್ಥನೆ.

ಅಧ್ಯಕ್ಷರು.—ಹೆಚ್ಚಾಗಿ ಕೇಳುವುದಿದ್ದರೆ ಕೇಳಿ, ಹಾಗಿಲ್ಲದೆ ಸರ್ಕಾರದವರು ಏನೂ ಸೌಕರ್ಯ ಒದಗಿಸಿಲ್ಲ ವೆಂದು ಹೇಳಿದರೆ ಅದು ಸರಿಯಲ್ಲ.

Mr. SPEAKER.—Cut motion moved :

" That the demand be reduced by Rs. 100. "

The House will now rise for lunch and meet again at 3-30.

The House adjourned for Lunch at Eight Minutes past Three of the Clock and reassembled at Thirty-eight Minutes past Three of the Clock.

[MR. SPEAKER in the Chair]

Statement by Sri Mulka Govinda Reddy.

Sri Mulka GOVINDA REDDY (Chitaldrug).—Sir, I request you to kindly permit me to make a statement in order to clear any possible misapprehension resulting from the statement of the Chief Minister the other day that I tried to influence him and that he did not yield to it. In view of your ruling given earlier, precluding the question being raised now, it has become necessary to make this statement to clear such misapprehensions.

It may be that in my capacity as a member of the Legislature, I meet the Chief Minister or other Ministers to urge for consideration of certain legitimate grievances of the public or a section of them, as I consider that it is my duty to do so. But I can assure you, Sir, and through you the members, that I never approached the Chief Minister on behalf of any officer in respect of revision of age.

Thank you, Sir.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ಪಾಮಿ, ಈ ಖೋತಾ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ವಿಚಾರಗಳನ್ನು ತಿಳಿಸಲಿಚ್ಛಿಸುತ್ತೇನೆ. ನನಗೆ ಖಾಯಿಲೆಯಾಗಿದ್ದರೂ ಸಹ ಈ ವಿಚಾರದ ಮೇಲೆ ಒಂದೆರಡು ಅಂಶಗಳನ್ನು ತಿಳಿಸಬೇಕೆಂದು ಮನಸ್ಸು ಬಾಧಿಸುತ್ತಿದೆ.

ಮೈಸೂರು ಸಂಸ್ಥಾನದಲ್ಲಿ ಬೋರ್ಡಿಂಗ್ ಹೋಂಗಳಿಗೆ ಎಷ್ಟು ವರ್ಷಗಳಿಂದ ಪ್ರಸ್ತಾಪಿಸುತ್ತಿದ್ದರೂ ಆಗಿನಿಂದಲೂ ಒಂದೇ ರೀತಿ ಗ್ರಾಂಟು ಕೊಡುತ್ತಿದ್ದಾರೆ. ಹಿಂದೆ ಒಂದು ರೂಪಾಯಿಗೆ ಹತ್ತು ಸೇರು ಅಕ್ಕಿ, ಹದಿನಾಲ್ಕು ಸೇರು ರಾಗಿ ಇತ್ತು. ಈಗ ಒಂದು ರೂಪಾಯಿಗೆ ಒಂದೂವರೆ ಸೇರು ಅಕ್ಕಿ, ಮೂರು ಸೇರು ರಾಗಿ ಇದೆ. ಈಗಲೂ ಸಹ ಅದೇ ಗ್ರಾಂಟನ್ನೇ ಕೊಡುತ್ತಿದ್ದಾರೆ. ಜೈಲಿನಲ್ಲಿ ಕಠಿಣಜನರಾ ಅನುಭವಿಸುತ್ತಿರುವವರಿಗಾದರೂ ಹೆಚ್ಚಾಗಿ ದೊರಕುತ್ತಿದೆ. ಅದೇ ಬೋರ್ಡಿಂಗ್ ಹೋಂಗಳಲ್ಲಿರುವ ಮಕ್ಕಳು ಅನುಭವಿಸುತ್ತಿರುವ ಕಷ್ಟ ಹೇಳತೀರದು. ಇದೇ ವಿಚಾರದಲ್ಲಿ ಪಾಲಸಿ ಸಮಿತಿಯಲ್ಲಿ ಸಹ ನಾವು ಒಂದು ನಿರ್ಣಯ ಮಾಡಿ ಅದನ್ನು ಸರ್ಕಾರದವರಿಗೆ ಕಳುಹಿಸಿದ್ದೇವೆ. ಅದು ಏನಾಯಿತೋ ಗೊತ್ತಾಗಲಿಲ್ಲ; ಮತ್ತು ಸಂಸ್ಥಾನಾಮಳೆ ಹಿಂದುಳಿದ ಪಂಗಡದವರ ಏಳಿಗೆಯ ವಿಚಾರದಲ್ಲಿ ಡೈರೆಕ್ಟರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನಡೆದು ಅದರಲ್ಲಿ ನಿರ್ಣಯವೊಂದನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದೆ. ಅದರ ವಿಚಾರ ಸಹ ಗೊತ್ತಿಲ್ಲ. ಈದಿನ ನಮ್ಮ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ನಾಲ್ಕುಕೋಟಿ ರೂಪಾಯಿಗಳನ್ನು ಒದಗಿಸುತ್ತಾರೆ. ಹೀಗೆ ವರ್ಷ್ ವರ್ಷ್ ಈ ಬಗ್ಗೆ ಹಣವನ್ನು ಜಾಸ್ತಿಯಾಗಿ ಒದಗಿಸುತ್ತಿದ್ದರೂ ಸಹ ಅದು ಹೇಗೆ ಖರ್ಚಾಗುತ್ತಿದೆಯೆಂಬ ಬಗ್ಗೆ ಶಂಕೆ ಉಂಟಾಗಲು ಅವಕಾಶವಾಗಿದೆ. ಹೈನ್ಯೂಲು ಮತ್ತು ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಹೆಚ್ಚಿಸಬೇಕು, ಹರಿಜನರಿಗೆ ಮಾತ್ರವಲ್ಲದೆ ಇತರ ಹಿಂದುಳಿದ ಕೋಮಿನವರಿಗೂ ಈ ವಿಚಾರದಲ್ಲಿ ಹೆಚ್ಚಿನ ಪರಿಹಾರ ದೊರಕಬೇಕು ಎಂಬ ಮನವಿ ಈಗ್ಗೆ ನಾಲ್ಕಾರು ವರ್ಷಗಳಿಂದಲೂ ಸರ್ಕಾರದವರಿಗೆ ಈ ನಭೆಯ ಮೂಲಕವೂ, ಇತರ ವಿಧಾನಗಳಲ್ಲೂ ಬರುತ್ತಿದೆ. ಈಗ್ಗೆ ಆರು ವರ್ಷಗಳಿಂದ ಸರ್ಕಾರದ ಮುಂದಿಡುತ್ತಿದ್ದ ಈ ಬೇಡಿಕೆ ಪ್ರಜಾನರ್ಕಾರ ಬಂದಮೇಲಾದರೂ ಈಡೇರುತ್ತದೆಂಬ ನಮ್ಮ ನಂಬಿಕೆ ಈಗ ನಿರಾಶಾದಾಯಕವಾಗಿದೆಯೆಂದು ತಿಳಿಸಲು ನನಗೆ ಬಹಳ ವ್ಯಸನವಾಗುತ್ತದೆ. ಈವರ್ಷ ಹಾಸನ ಡಿಸ್ಟ್ರಿಕ್ಟಿನಲ್ಲಿ ಹೈನೂಲ್ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ ಹಂಚಿಕೆಯಾಗುವುದರಲ್ಲಿ 60-70 ಅರ್ಜಿಗಳು ಬಂದಿದ್ದರೂ allotment ಒಂಬತ್ತಕ್ಕೆ ಮಾತ್ರ. ಅದರಲ್ಲಿ ಐದು ಮಂದಿಗೆ renew ಆಗಿಹೆ, ಮಿಕ್ಕ ನಾಲ್ಕುಮಂದಿಗೆ ಹೊಸದಾಗಿ ಸಿಕ್ಕಿದೆ. ಹೀಗಾದರೆ ಇದು ಯಾವ ರೀತಿ ಹಂಚಿಕೆ ಎಂಬುದನ್ನು ಯೋಚಿಸಬೇಕು. ಈ ರೀತಿ ಬಡ ಜನಾಂಗವನ್ನು ಉದ್ಧಾರ ಮಾಡಬೇಕೆಂದು ಇಂಡಿಯಾ ಸರ್ಕಾರವವರು ರಾಜ್ಯಾಂಗ ವಿಧಿಯಲ್ಲಿ ಸಹ ವಿಧಿವತ್ತಾಗಿ ತಿಳಿಸಿರುವಾಗ ಈ ರೀತಿ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಉತ್ತೇಜನವನ್ನು ಕೊಟ್ಟು ಇವರನ್ನು ಮುಂದುವರಿಸದಿದ್ದರೆ ಏನು ಪ್ರಯೋಜನ? ಹಿಂದುಳಿದ ಜನಾಂಗ ಹರಿಜನರಲ್ಲಿ ಮಾತ್ರವೇ ಅಲ್ಲದೆ ಇತರ ಕೋಮುಗಳಲ್ಲೂ ಬೇಕಾದಷ್ಟುಮಂದಿ ಇದ್ದಾರೆ. ಸರ್ಕಾರದವರು ಇಷ್ಟೊಂದು ಹಣವನ್ನು ವಿದ್ಯಾಭಿವೃದ್ಧಿಗಾಗಿ ಖರ್ಚು ಮಾಡುವಾಗ ಇವರಿಗೂ ಒಂದಿಷ್ಟು ಹೆಚ್ಚು ಹಣ ಖರ್ಚು ಮಾಡಿ ಇವರು ಮುಂದುವರಿಯುವುದಕ್ಕೆ ಸಹಾಯಕರಾಗು